ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್ – 2021)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade - 2021)

**E-mail:** rcubacademic2010@gmail.com    ಕುಲಸಚಿವರ ಕಾರ್ಯಾಲಯ    **Website:** www.rcub.ac.in

ಪ.ಸಂ.: ರಾಚವಿಬೆ/ಕುಸಕಾ/ವಿಮವಿ/ಸ್ನಾತಕೋತ್ತರ/2022-23/4046    ದಿನಾಂಕ: 26 DEC 2022

## ಸುತ್ತೋಲೆ

**ವಿಷಯ:** 2022-23ನೇ ಶೈಕ್ಷಣಿಕ ಸಾಲಿಗಾಗಿ **ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಶ್ವವಿದ್ಯಾಲಯ** ಮೀಸಲಾತಿಯಲ್ಲಿ **(University Quota) ಕೋಟಾದಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯದ ಶುಲ್ಕ ಬಿಟ್ಟು ಬೇರೆ ಯಾವುದೇ ಹೆಚ್ಚಿನ ಶುಲ್ಕವನ್ನು ಆಕರಿಸದಿರುವ ಕುರಿತು.**

**ಮೇಲ್ಕಾಣಿಸಿದ** ವಿಷಯದನ್ವಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2022-23ನೇ ಶೈಕ್ಷಣಿಕ ಸಾಲಿಗಾಗಿ ಸಂಯೋಜಿತ **ಸ್ನಾತಕೋತ್ತರ ಅಧ್ಯಯನ** ವಿಭಾಗಗಳನ್ನು ನಡೆಸುತ್ತಿರುವ ಮಹಾವಿದ್ಯಾಲಯಗಳ **ಪ್ರಾಂಶುಪಾಲರುಗಳಿಗೆ** ಈ ಮೂಲಕ **ತಿಳಿಸುವುದೇನೆಂದರೆ, 2022-23** ನೇ ಶೈಕ್ಷಣಿಕ ಸಾಲಿಗೆ **ಸ್ನಾತಕೋತ್ತರ ಪ್ರಥಮ ಸೆಮಿಸ್ಟರಗೆ ವಿಶ್ವವಿದ್ಯಾಲಯ ಮೀಸಲಾತಿಯಲ್ಲಿ (University Quota)** ಮೆರಿಟ್ ಆಧಾರದ ಮೇಲೆ **ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯದ ಶುಲ್ಕ ಬಿಟ್ಟು ಬೇರೆ ಯಾವುದೇ ಶುಲ್ಕವನ್ನು ಆಕರಿಸಬಾರದೆಂದು** ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

**ಮುಂದುವರೆದು,** ಈ ಸೂಚನೆಯನ್ನು ಮೀರಿ ಯಾವುದೇ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳು, (University Quota)ದಡಿ ಸ್ನಾತಕೋತ್ತರ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ **ವಿಶ್ವವಿದ್ಯಾಲಯದ ನಿಗದಿತ ಶುಲ್ಕವನ್ನು ಹೊರತುಪಡಿಸಿ, ಹೆಚ್ಚಿನ ಶುಲ್ಕವನ್ನು** ಯಾವುದೇ ಸೆಮಿಸ್ಟರ್‌ನಲ್ಲಿ ಆಕರಣೆ ಮಾಡಿರುವುದು ದೂರು ಬಂದಲ್ಲಿ **ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣದ (63)ರ ಉಪ ಪ್ರಕರಣ (1)ರ** ಅನುಗುಣವಾಗಿ ತಮ್ಮ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳ ಸಂಯೋಜನೆಯನ್ನು ಹಿಂತೆಗೆದುಕೊಳ್ಳಬಹುದೆಂದು ತಿಳಿಸಲು ನಿರ್ದೇಶಿತನಾಗಿರುತ್ತೇನೆ.

Hanthalakti
26/12/2022

**ಕುಲಸಚಿವರು**

ಕುಲಸಚಿವರು
ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯ
ವಿದ್ಯಾ ಸಂಗಮ

ಇವರಿಗೆ,

- **ರಾಣಿ ಚನ್ನಮ್ಮ** ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ **ಜಿಲ್ಲೆಗಳಲ್ಲಿ ಸ್ನಾತಕೋತ್ತರ** ಅಧ್ಯಯನ ವಿಭಾಗಗಳನ್ನು ನಡೆಸುತ್ತಿರುವ **ಪ್ರಾಂಶುಪಾಲರುಗಳಿಗೆ,**